ಕಡೂರು ಡಿಸ್ಟ್ರಿಕ್ಟು.

ತಾರೀಖು 22ನೇ ಡಿಸಂಬರ್ 1886.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ಒಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ಯನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸುತ್ತೆ.

ಜಿಲ್ಲೆ ನಂ.	ಯೂನಿಯನ್ ನಂಬರ್.	ದಸ್ತಾವೇಜು ನಂಬರ್.	ದಸ್ತಾವೇಜು ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿಗೆ ಪಾಸಾದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	I	54 / 1884—85	22—5—84	22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ವಯಕ್ಕೆ ಕೊಟ್ಟಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಸೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟರುವದಾಗಿ.
2	ಡಿಟೋ	58 / 1884—85	26—5—84	26—5—84	ತಿರಿಗೂರಲ್ಲಿರುವ ದೇವಾಚಾರ್ಯದ ಜಾತಿ ಹುಲಿಗೌಡನ ಮಗ ನಂಜೇಗೌಡ	ತಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಚ್ಚಯ್ಯನೇರ್ಪೊಗಾರ	ತಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 / 1884—85	22—7—84	23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸನ್ನ ಬೈಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ವೈಕೀ ಕಾಫಿ ಹಿತ್ತು 50 ರೂಪಾಯಿಯನ್ನ ತೀರಿಸಿಕೊಳ್ಳುವ ಬಗ್ಯೆ 10 ವರುಷದ ವರಿಗೆ ಇಳಿಭೋಗ್ಯಾಧಿ ಮಾಡಿರುವಂತ್ತೆ.

ಟಿ. ವ್ಯಾಂಡರ್ಲೋ,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜ್ರೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೀದಾರ ಬೆಂಗಳೂರು ಬಿದ್ದಿಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ಯ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ|| 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವ್ತೆ ಸಬ್ ಜಡ್ಜಿಯವರಾದ ಮೆ|| ಸಿ. ಕ್ರೈನ್ ಸಾಹೇಬರವರ ರೂಬ್ರುತೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರಿಯವಳ ದೇಣೀದಾರ್ರಾದ 1—2ನೇರ ತರಫ ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ತರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವಳನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1886ನೇ ಇಸವಿ ಡಿಸಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸೂಲದ ಪಟ್ಟಿ.

ನಂಬರ್.	ಲೇನೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹೂಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಡಬೇಕಾಗಿರುವ ಹಣ.	ಯಾವಾಗ ಕೊಡಬೇಕಾಗಿ ಬಂದಿರುವದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರು ಇದ್ದರೆ.	ಷರಾ.
		ರೂ.			
1	ಬೆಂಗಳೂರಲ್ಲಿರತಕ್ಕ ಹುಮಾತ್‌ಬಿ ..	82 4 4	..	ಬೆಂಗಳೂರು ಮುನಸಿಫ್ ಕೋರ್ಟು 1886ನೇ ಇಸವಿ ಅರಿಜಿನಲ್ 43ನೇ ನಂ. ಬಾಬತು ಕೋರ್ಟು ಖರ್ಚು ವೊಬಲಗು.	
2	ಮುಹಮ್ಮದ್ ಯಾಕೂಬ್ ಬೆಂಗಳೂರು ..				

ಸಿ. ಕ್ರೈಸ್,
ಸಬ್ ಜಡ್ಜ್.

ಗೈರವಿಲಾ ಆದ

ಬಲಭಾಗದ ಕರೆನ್ಸಿನೋಟ್‌ಗಳ

ನಂಬರ್	ಸ್ಟರ್ಲಿಂಗ್ ಕ್ರಯ.	ಹಕ್ಕುದಾರ—
B. 90—30886	,, ರೂ. 20	ಕ್ಲೋಸ್‌ಪೇಟೆ ಈಸಬಾ ಸ್ವಾಂಪ್‌ವೆಂಡರ್ ಭೀಮರಾವ್.
B. 82—91553	,, ,, 20	

ನೋಟೀಸ್.

ಕೊಡಗು ಫಾರೆಸ್ಟ್ಸ್ ಡಿಪ್ಯೂಟಿ ಕನ್‌ಸರ್‌ವೇಟರ್ ಆಫಿಸಿನಿಂದ.

ತಾರೀಖು 23ನೇ ಮಾಹೆ ಡಿಸೆಂಬರ್ 1886.

ಇದರಡಿ ನಮೂದಿಸಲ್ಪಟ್ಟ ಹುಣಸೂರು ಡಿವೋದಲ್ಲಿ ಇರತಕ್ಕ ನಾಟಗಳನ್ನು ಬರುವ ಸ್ನ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾಗಿ ಹರಾಜು ಮೂಡೋಣಾಗುತ್ತದೆ.

ಸಾಗುವಾನಿ ನಾಟಗಳು 400. ಇತರ ನಾಟಗಳು 400.

ಷರತ್ತು—ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರು ಸ್ನ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯನ್ನು ನೋಡು.

ಯಫ್. ಬಿ. ಡಿಕ್ಕ್ರ್ಸ್,
ಡಿಪ್ಟಿ ಕನ್‌ಸರ್‌ವೇಟರ್ ಕೊಡಗು ಫಾರೆಸ್ಟ್ಸ್ ಡಿವೀಜನ್.

ಕ್ರಿಸ್ಟಲ್ಲೈನ್ ಸಿಂಖೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ್ ಕೋಯಿಯಲ್ಲಿ ಕೆಂಪುವರ್ಣದ ಸಿಂಖೋನಾ ಪಟ್ಟೆಯಿಂದ ತಯಾರ್‌ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್‌ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲ್‌ಕತ್ತೆಬಳಿ ಸೀಬ್‌ಪೂರ್ ಸಮಿಪದಲ್ಲಿ ರಾಯಲ್‌ಬೊಟಾನಿಕಲ್ ಗಾರ್ಡ್ನ್ ಸೂಪರ್‌ಟೆಂಡೆಂಟ್‌ರಿಂದ ಗವರ್ನಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡ್ ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕಲ್ ಗಾರ್ಡ್ನ್ ಸೂಪರ್‌ಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್‌ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ಸ್ ಮತ್ತು ನೇಟಿವ್ ಡಗ್ಗಿಸ್ಟ್‌ರ್‌ಗಳಿಗೂ ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.